# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177-222223
E.Mail : aeehsnbelur@rediffmail.com


ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಜೇ/2018-19/F-16/781-82 ದಿನಾಂಕ : 8.06.18

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 28.5.18 ರ ಸೋಮವಾರದಂದು ಮಾನ್ಯ ಸುಚೇತನ, ಅಧೀಕ್ಷಕ ಇಂಜಿನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀ ನಾರಾಯಣ ಬೋವಿ, ಕಾ. ಇಂ(ವಿ), ಸಕಲೇಶಪುರ ವಿಭಾಗ.
2. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
3. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ.ಪ), ಸಕಲೇಶಪುರ ವಿಭಾಗ.
4. ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
5. ಶ್ರೀ ಕುಮಾರ್ ಎನ್. ಡಿ. ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
6. ಶ್ರೀ ಚಿಕ್ಕವರದಯ್ಯ, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
7. ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
8. ಶ್ರಿ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
9. ಶ್ರಿ ಎಂ. ರೇವಣ್ಣ, ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.

ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3 : 00 ಘಂಟೆಗೆ ಪ್ರಾರಂಭ ಮಾಡಿದರು.

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಶ್ರೀ ಪ್ರಕಾಶ್ ಗೌಡ ಹಾಗೂ ಗ್ರಾಮಸ್ಥರು, ಡೋಲನಮನೆ ರವರುಗಳು ತಮ್ಮ ಗ್ರಾಮದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲು ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಬೇಕೆಂದು ಕೋರಿದರು.

   ಅದಕ್ಕೆ ಅರೇಹಳ್ಳಿ ಶಾಖಾಧಿಕಾರಿಗಳು ಸದರಿ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

   ಸಭೆಯ ಅಧ್ಯಕ್ಷರು ಮಂಜೂರಾತಿ ಪಡೆದ ನಂತರ ಜುಲೈ-18 ರ ಮಾಹೆಯ ಮೊದಲನೆ ವಾರದೊಳಗೆ ಕಾಮಗಾರಿಯನ್ನು ಸಂಪೂರ್ಣಗೊಳಿಸುವಂತೆ ಅರೇಹಳ್ಳಿ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.

2. ಶ್ರೀ ಬಿ. ಎಸ್. ಯೋಗೇಶ್, ಮಳವಳ್ಳಿ ಗ್ರಾಮ ಇವರು ತಮ್ಮ ತೋಟದ ಹತ್ತಿರ ಹಾಗೂ ಮಳವಳ್ಳಿ ಗ್ರಾಮ ವ್ಯಾಪ್ತಿಗೆ ಸೇರಿದ ತೋಟಗಳಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗದ ಮೇಲೆ ಮರಗಳು ಬೀಳುವ ಸಂಭವವಿದ್ದು ಮುಂದೆ ಯಾವದೇ ರೀತಿಯಲ್ಲೂ ಹಾನಿಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಸಭೆಯಲ್ಲಿ ಮನವಿ ಮಾಡಿಕೊಂಡರು.

   ಸಭೆಯ ಅಧ್ಯಕ್ಷರು ಮಾರ್ಗ ಮುಕ್ತತೆ ಪಡೆದು ಶೀಘ್ರವೇ ಜಂಗಲ್ ಕ್ಲಿಯರ್ ಮಾಡಿಸಲು ಅರೇಹಳ್ಳಿ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.

3. ಶ್ರೀ ಕೆ. ಬಿ. ಲಕ್ಷ್ಮಣ್, ಹಿರಿಗದ್ದೆ ರವರು ತಮ್ಮ ಐ.ಪಿ. ಸ್ಥಾವರಕ್ಕೆ ಲೋ ವೋಲ್ಟೇಜ್ ಸಮಸ್ಯೆಯಾಗಿದ್ದು, ತಮ್ಮ ಕೃಷಿ ಕಾರ್ಯಕ್ಕೆ ಅನುಕೂಲವಾಗುವಂತೆ UNIP ಯೋಜನೆಯಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ.

   ಸಭೆಯ ಅಧ್ಯಕ್ಷರು UNIP ಯೋಜನೆಯಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ತೊಳಲು ಶಾಖಾಧಿಕಾರಿಯವರಿಗೆ ಸೂಚಿಸಿದರು ಹಾಗೂ ಹಣ ಪಾವತಿಸದೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುವವರ ಮೇಲೆ ವಿಜಿಲೆನ್ಸ್‌ಗೆ ಸಬ್ ಇನ್ಸ್‌ಪೆಕ್ಟರ್ ಗೆ ದೂರವಾಣಿ ಮುಖಾಂತರ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

4. ಶ್ರೀ ಹೆಚ್. ಎನ್. ಸದಾಶಿವಮೂರ್ತಿ ಬಿನ್ ನಂಜೇಗೌಡ, ಹಳೇಬೀಡು, ಹಳೇಬೀಡು ಗ್ರಾಮದಲ್ಲಿ ಮನೆಗಳ ಮೇಲೆ ಹಾದು ಹೋಗಿರುವ 11 ಕೆವಿ ಮಾರ್ಗವನ್ನು ಸ್ಥಳಾಂತರಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಮುಖ್ಯ ಇಂಜಿನಿಯರ್, ಮೈಸೂರು ರವರ ಕಛೇರಿಯಲ್ಲಿ ಈಗಾಗಲೇ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ತದಾನಂತರ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

5. ಜಿ. ಬಿ. ಸುಂದರೇಶ್, ಕಣದೂರು ಗ್ರಾಮದಲ್ಲಿ ತುಂಬಾ ವಿದ್ಯುತ್ ಸಮಸ್ಯೆಯಿದ್ದು ವಿದ್ಯುತ್ ಮಾರ್ಗ ಬದಲಾಯಿಸಲು ಕೋರಿದರು.

ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗುವುದು ಎಂದು ತೊಳಲು ಶಾಖಾಧಿಕಾರಿಯವರು ಸಭೆಗೆ ತಿಳಿಸಿದರು.

6. ರಾಜಶೇಖರ್, ದಬ್ಬೆ ರವರು ದಬ್ಬೆ ಗ್ರಾಮದಲ್ಲಿ 11 ಪರಿವರ್ತಕಗಳು ಒಂದೇ D.O.L.O. ಮೇಲೆ ಅಳವಡಿಸಲಾಗಿದ್ದು, ಬೇರೆ ಫೀಡರ್ ಮಾಡುವಂತೆ ಕೋರಿದರು.

ವಿದ್ಯುತ್ ಗುತ್ತಿಗೆದಾರರ ಮೂಲಕ G.O.S. ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸುವಂತೆ ತೊಳಲು ಶಾಖಾಧಿಕಾರಿಯವರಿಗೆ ತಿಳಿಸಲಾಯಿತು.

ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್ ಎಂಬ ವಿದ್ಯುತ್ ಗುತ್ತಿಗೆದಾರರಿಗೆ ಅಧ್ಯಕ್ಷರು ಅವಾರ್ಡ್ ಹಾಕಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಬೇಕಾಗಿ ತಿಳಿಸಿರುತ್ತಾರೆ.

7. ಕುಮಾರ ಎನ್. ಜಿ., ನವಿಲಹಳ್ಳಿ, ತಮ್ಮ ಗ್ರಾಮದಲ್ಲಿ ವಿದ್ಯುತ್ ಮಾರ್ಗಗಳು ತೋಟದ ಮಾರ್ಗಗಳಲ್ಲಿ ಹಾದು ಹೋಗಿದ್ದು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿಕೊಡಲು ಕೋರಿದರು.

ಸ್ಥಳ ಪರಿಶೀಲಿಸಿ ಸ್ವಯಂ ಕಾರ್ಯ ಯೋಜನೆಯಡಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ತೊಳಲು ಶಾಖಾಧಿಕಾರಿಯವರಿಗೆ ಸಭೆಯಲ್ಲಿ ಸೂಚಿಸಲಾಯಿತು.

8. ತಗರೆ-ಕೋಗಿಲೆಮನೆ ಗ್ರಾಮಸ್ಥರು, ತಮ್ಮ ಗ್ರಾಮದಲ್ಲಿ 100 ಕೆವಿಎ ಪರಿವರ್ತಕವು ಸುಟ್ಟು ಹೋಗಿದ್ದು, ಸುಮಾರು 35 ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ಇದ್ದು, ಶೀಘ್ರವಾಗಿ ಸಮಸ್ಯೆ ಪರಿಹರಿಸಿಕೊಡಬೇಕೆಂದು ಕೋರಿದರು.

ಆದಷ್ಟು ಶೀಘ್ರವಾಗಿ ಪರಿವರ್ತಕವನ್ನು ಅಳವಡಿಸಿ ಸಮಸ್ಯೆಯನ್ನು ಪರಿಹರಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಲಾಯಿತು.

9. ಶ್ರೀ ತಿಮ್ಮೇಗೌಡ ರಂಗನಾಥ ರೈಸ್ ಮಿಲ್, ರವರು ತಮ್ಮ ಸ್ಥಾವರದ ಸಂಪರ್ಕವಿರುವ 100 ಕೆವಿಎ ಪರಿವರ್ತಕಕ್ಕೆ ಅನಧಿಕೃತ ಭಾರ ಜಾಸ್ತಿ ಇರುವುದರಿಂದ ಅಧಿಕ ಪರಿವರ್ತಕ ಅಳವಡಿಸುವಂತೆ ಮನವಿ ಮಾಡಿದರು ಹಾಗೂ ತಮ್ಮ ಸ್ಥಾವರಕ್ಕೆ ಅಧಿಕ ಲೋಡ್ ಒದಗಿಸಿಕೊಡುವಂತೆಯೂ ಸಹಾ ಕೋರಿದರು.

ನಿಗಮದ ನಿಯಮಾನುಸಾರ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಿಕೊಡುವಂತೆ ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಯವರಿಗೆ ಸೂಚಿಸಿದರು.

10. ಶ್ರೀಮತಿ ಜಯಂತಿ ಅಶೋಕ್, ಗ್ರಾಮ ಪಂಚಾಯತಿ ಸದಸ್ಯರು ಇವರು ತಮ್ಮ ಮನೆಯ ಹತ್ತಿರ ಇರುವ ವಿದ್ಯುತ್ ಮಾರ್ಗವು ತುಂಬಾ ಕೆಳಭಾಗದಲ್ಲಿ ಇದ್ದು, ಸೂಕ್ತ ಸ್ಥಕ್ಕೆ ಸ್ಥಳಾಂತರಿಸುವಂತೆ ಮನವಿ ಮಾಡಿದರು.

ಸ್ಥಳ ಪರಿಶೀಲಿಸಿ ವಿದ್ಯುತ್ ಮಾರ್ಗವನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸಭೆಯ ಅಧ್ಯಕ್ಷರು ಅರೇಹಳ್ಳಿ ಶಾಖಾಧಿಕಾರಿಯವರಿಗ್ಗೆ ಸೂಚಿಸಿದರು.

11. ಶ್ರೀ ತೀರ್ಥಪ್ಪ ಹಾಗೂ ಗ್ರಾಮಸ್ಥರು ಕೋನೇರ್ಲು, ತಮ್ಮ ಗ್ರಾಮದಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಿಕೊಡುವಂತೆ ಕೋರಿದರು ಹಾಗೂ ತಮ್ಮ ಗ್ರಾಮದಲ್ಲಿ ತುಂಬಾ ವೋಲ್ಟೇಜ್ ಸಮಸ್ಯೆ ಇರುವುದಾಗಿ ತಿಳಿಸಿದರು.

ಇನ್ನು 10 ದಿನಗಳಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಿ ಉತ್ತಮ ಕಂಬಗಳನ್ನು ಹಾಕಿಕೊಡಲಾಗುವುದು ಹಾಗೂ 3 ದಿನದೊಳಗಾಗಿ ವೋಲ್ಟೇಜ್ ಚೆಕ್ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತೊಳಲು ಶಾಖಾಧಿಕಾರಿಯವರು ಸಭೆಗೆ ತಿಳಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 5 : 00 ಕ್ಕೆ ಮುಕ್ತಾಯಗೊಳಿಸಲಾಯಿತು.**

For Nikil

ಸಹಾಯಕ ಕಾರ್ಯಪಾಲಕ ಇಂಜಿನಿಯರ್

(ಕಾ) ಮತ್ತು (ಪಾ) ಉಪ-ವಿಭಾಗ

ಚಾ. ವಿ. ಸ. ನಿ. ನಿ., ಬೇಲೂರು

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)

ಕಾ ಮತ್ತು ಪಾ ಉಪ-ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು ;*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.